**ಕನ್ನಡದಲ್ಲಿ ಕಿಂಡಲ್ ಪುಸ್ತಕ ಪ್ರಕಟಿಸಿ ಅಮೆಝಾನ್ ನಲ್ಲಿ ಮಾರುವುದು ಹೇಗೆ?**

ಕನ್ನಡ ಭಾಷೆಗೆ ಅಧಿಕೃತ ಮನ್ನಣೆ ನೀಡದ ಅಮೇಜಾನ್ ಕಿಂಡಲ್ ನಲ್ಲಿ ಸಹ ಕನ್ನಡ ಕಿಂಡಲ್ ಇ-ಪುಸ್ತಕ ಪ್ರಕಟಿಸಲು ಒಂದು ದಾರಿಯಿದೆ. ಅದು ಸಹ ಅಧಿಕೃತ ದಾರಿಯೆ.


ಅವರದೇ ಆದ ಕಿಂಡಲ್ ಕ್ರಿಯೇಟ್ ಆ್ಯಪಿನಲ್ಲಿ  ನೀವು ಕೆ ಪಿ ಎಫ್ (KPF) ಎಂಬ ಫೈಲ್ ಸೃಷ್ಟಿ ಮಾಡಿ ಕೆಡಿಪಿ (KDP) ಯಲ್ಲಿ ಅದನ್ನು ಕಿಂಡಲ್ ಇ-ಪುಸ್ತಕವಾಗಿ ತಯಾರಿಸಬಹುದು. ಅದರಿಂದ ಪಡೆದ ಕಿಂಡಲ್ ಫೈಲು ನಿಮಗೆ ಕಿಂಡಲ್ ಮೊಬೈಲ್ ಆಪ್ ಮತ್ತು ವಿಂಡೋಸ್ ಡೆಸ್ಕ್ ಟಾಪ್ ಆಪ್, ಐಫೋನ್ ಅಲ್ಲದೇ ಕಿಂಡಲ್ ಫೈರ್ HD ಟ್ಯಾಬ್ಲೆಟ್ಟಿನಲ್ಲಿ  ಓದಬಹುದು.




https://kdp.amazon.com/en_US/help/topic/GUGQ4WDZ92F733GC

ಕಿಂಡಲ್ ಕ್ರಿಯೇಟ್ app download ಮಾಡುವ ಮೇಲಿನ ಲಿಂಕ್ ಉಪಯೋಗಿಸಿ, ವಿಂಡೋಸ್ ಆರಿಸಿಕೊಳ್ಳಿ. (ಮ್ಯಾಕ್ ಸಹ ಇದೆ, ಅದು ನನಗೆ ಗೊತ್ತಿಲ್ಲ)

ಈ  ಕೆಳಗಿನ ಚಿತ್ರ ನೋಡಿ,  ಪೂರ್ತಿಯಾದ ಕಿಂಡಲ್ ಪುಸ್ತಕ ಹೀಗೆ ಕಾಣಸುತ್ತದೆ ಚಿತ್ರ (1). ಕೆಲವು ಕಿಂಡಲ್ ಸಾಧನದಲ್ಲಿ ಹೀಗೂ ಕಾಣಿಸಬಹುದು. ಚಿತ್ರ(2). ಸರಿಯಾಗಿದೆ ಅಲ್ಲವೆ?



# ಅಬಲೆಯ ಬಲೆ

(ಪತ್ತೇದಾರಿ ಕಾದಂಬರಿ)

~ ನಾಗೇಶ್ ಕುಮಾರ್ ಸಿಎಸ್

(ಈ ಕತೆಯಲ್ಲಿ ಬರುವ ಪಾತ್ರಗಳು, ಸನ್ನಿವೇಶಗಳು, ಸ್ಥಳಗಳು ಕಾಲ್ಪನಿಕವೆಂದೂ ಯಾವುದೇ ನಿಜಜೀವನದ ವ್ಯಕ್ತಿ/ ಸ್ಥಳಗಳಿಗೆ ಸಂಬಂಧಿಸುದುದಲ್ಲ ಎಂದು ತಿಳಿಸಲಾಗಿದೆ)

೧

“ನನ್ನ ಪತ್ನಿ ಮತ್ತು ಮಗನನ್ನು ದಯವಿಟ್ಟು ಹುಡುಕಿ ಕೊಡಿ...” ಎಂದು ಯಾವುದೇ ಪೀಠಿಕೆಯಿಲ್ಲದೇ ಕೇಳಿದರು ದಿವಾಕರ ನಾಡಿಗ್.


ಪತ್ತೇದಾರರಾದ ನನಗೆ ಮತ್ತು ನನ್ನ ಪಾಲುದಾರ ವಿಕ್ರಮ್‌ಗೆ ಈ ಕಳೆದುಹೋದವರನ್ನು ಹುಡುಕುವುದು ಹೊಸದೂ ಅಲ್ಲ, ಕಷ್ಟವೂ ಅಲ್ಲ. ಕಕ್ಷಿದಾರರ ಈ ತರಹದ ಬೇಡಿಕೆ ಅಪರೂಪವಂತೂ ಅಲ್ಲವೇ ಅಲ್ಲ...

ಆದರೆ ನಾವು ಅಪ್ರತಿಭರಾಗಿ ಅವರತ್ತ ನೋಡಿದ್ದೆವು. ಅದಕ್ಕೆ ಬಲವಾದ ಕಾರಣವಿತ್ತು.

ಏಕೆಂದರೆ ಕೇಳಿದವರು ದಿವಾಕರ ನಾಡಿಗ್...ರಾಜ್ಯದ ಮತ್ತು ರಾಷ್ಟ್ರೀಯ ಚಿತ್ರರಂಗದಲ್ಲಿ ಕಳೆದ ಐದು ವರ್ಷಗಳಿಂದ ಒಂದಾದ ನಂತರ ಯಶಸ್ವಿ ಚಿತ್ರಗಳ ಸರಮಾಲೆಯನ್ನೇ ಕೊರಳಿಗೆ ತೊಟ್ಟಿದ್ದ ಸೆಲೆಬ್ರಿಟಿ ನಿರ್ದೇಶಕ.

ಕೋಟ್ಯಂತರ ರೂ.ಗಳ ಚಲಚಿತ್ರೋದ್ಯಮದಲ್ಲಿ ಮೇರು ಸ್ಥಾನದಲ್ಲಿ ಮಿಂಚುತ್ತಿದ್ದು, ಮಾಧ್ಯಮಗಳಿಂದ ‘ಬ್ಲಾಕ್‌ಬಸ್ಟರ್ ಕಿಂಗ್ ’, ‘ಚಿತ್ರ ಮಾಂತ್ರಿಕ ’ ಎಂಬ ಬಿರುದಾಂಕಿತರು...೪೦ ವರ್ಷ ವಯಸ್ಸಿನ ಈತ ಅವಿವಾಹಿತ, ಬ್ರಹ್ಮಚಾರಿ ಎಂದು ಚಿತ್ರರಸಿಕರೆಲ್ಲಾ ನಂಬಿದ್ದ ಜನಪ್ರಿಯ ವ್ಯಕ್ತಿ!. ಇವರ ’ಪತ್ನಿ ಮತ್ತು ಮಗನೆ’? ಎಂದು

95 % 1 of 163 14:15



ಅಬಲೆಯ ಬಲೆ

(ಪತ್ತೇದಾರಿ ಕಾದಂಬರಿ)

~ ನಾಗೇಶ್ ಕುಮಾರ್ ಸಿಎಸ್

(ಈ ಕತೆಯಲ್ಲಿ ಬರುವ ಪಾತ್ರಗಳು, ಸನ್ನಿವೇಶಗಳು, ಸ್ಥಳಗಳು ಕಾಲ್ಪನಿಕವೆಂದೂ ಯಾವುದೇ ನಿಜಜೀವನದ ವ್ಯಕ್ತಿ/ ಸ್ಥಳಗಳಿಗೆ ಸಂಬಂಧಿಸುದುದಲ್ಲ ಎಂದು ತಿಳಿಸಲಾಗಿದೆ)

೧

“ನನ್ನ ಪತ್ನಿ ಮತ್ತು ಮಗನನ್ನು ದಯವಿಟ್ಟು




(1) (2)


ಒಮ್ಮೆ ಈ ಕ್ರಿಯೇಟ್ ಆಪ್ ನೀವು ಇನ್ಸಾಲ್ ಮಾಡಿಕೊಂಡರೆ ಮುಂದಿನ ಹೆಜ್ಜೆಗಳು ಹೀಗಿವೆ:

1. ನಿಮ್ಮ ಕಥೆ, ಕಾದಂಬರಿ/ಲೇಖನದ ಪಿಡಿಎಫ್ File ತಯಾರಿಸಿ ಇಟ್ಟುಕೊಳ್ಳಿ. ನೀವು ಅದನ್ನು ನುಡಿ, ಯೂನಿಕೋಡ್ ಫಾಂಟ್ಸ್- ಯಾವುದರಲ್ಲಿ ಬರೆದಿದ್ದರೂ ಪರವಾಗಿಲ್ಲ, ಒಮ್ಮೆ ವರ್ಡ್ -> Save As- ಪಿಡಿಎಫ್ ಮಾಡಿಕೊಂಡರೆ ಎಲ್ಲಾ ಒಂದೇ ಆಗಿಬಿಡುತ್ತದೆ.


2. ಈಗ ನಿಮ್ಮ ಕಿಂಡಲ್ ಕ್ರಿಯೇಟ್ ಆ್ಯಪ್ ತೆರೆಯಿರಿ. ಅದರಲ್ಲಿ ಹೀಗೆ ಕಾಣುತ್ತದೆ: create New ಕ್ಲಿಕ್ ಮಾಡಿ





1. ಇದರಲ್ಲಿ ನೀವು ಮೂರನೆಯ- "ಪ್ರಿಂಟ್ ರೆಪ್ಲಿಕಾ" ಮಾತ್ರ ಆಯ್ಕೆ ಮಾಡಿ ಕ್ಲಿಕ್ ಮಾಡಿ, Continue – ಕ್ಲಿಕ್ ಮಾಡಿ



2. ಹೀಗೆ ಕಾಣುತ್ತದೆ, ಆ ವಿವರಗಳನ್ನು ಬರೆಯಿರಿ, ಪುಸ್ತಕದ ಹೆಸರು, ಲೇಖಕನ ಹೆಸರು, ಪ್ರಕಾಶಕ. ನಾನು ಇಂಗ್ಲೀಷಿನಲ್ಲೇ ಬರೆದೆ, ನೀವೂ ಹಾಗೆ ಮಾಡಿ ಎಂದು ಸಲಹೆ.





3. ಈಗ ನೀವು ನಿಮ್ಮ ಕಂಪ್ಯೂಟರಿನಿಂದ ನಿಮ್ಮ ಲೇಖನದ PDF file ಆರಿಸಿಕೊಳ್ಳಿ
4. ಈಗ ಹೀಗೆ ನಿಮ್ಮ ಪಿಡಿಎಫ್ ಫೈಲು ತೆರೆಯುತ್ತದೆ. ( ಉದಾಹರಣೆಗೆ ಕನ್ನಡ - ಮುಳುಗುವ ಕೊಳ pdf)




5. ಬಲ ಮೂಲೆಯಲ್ಲಿರುವ export ಕ್ಲಿಕ್ ಮಾಡಿ.

ಹೀಗೆ ತೆರೆಯುತ್ತದೆ





6. ಈಗ ಅಲ್ಲಿ save ಮಾಡಿ.

7. ಅಷ್ಟೆ! ತಯಾರಾಗಿದೆ ನಿಮ್ಮ KPF filer. Show KPF ಕ್ಲಿಕ್ ಮಾಡಿ ಇದೆಯೆ, ನೋಡಿಕೊಳ್ಳಿ






8. 



- ಇದೆ!

9. Kindle previewer app ಇನ್ಸ್ಟಾಲ್ ಮಾಡಿ ಅದರಲ್ಲಿ ಈ ಫೈಲ್ ತೆರೆದು ನೋಡಿ. ಕನ್ನಡ ಲಿಪಿ ಸರಿಯಿದೆ ತಾನೆ?







10. ಸರಿಯಿದೆ!


11. ಇದನ್ನು ನಿಮ್ಮ ಕಿಂಡಲ್ ಡೈರೆಕ್ಟ್ ಪಬ್ಲಿಶಿಂಗ್ ವಎಬ್ ತಾಣದಲ್ಲಿ ಅಪ್ ಲೋಡ್ ಮಾಡಿ:

12. KDP site ಓಪನ್ ಮಾಡಿ: [https://kdp.amazon.com/en_US/create](https://kdp.amazon.com/en_US/create)


13. ಅಲ್ಲಿ + Create ಮಾಡಿ.




14. ಈ ವಿವರಗಳನ್ನು ಇಂಗ್ಲೀಷಿನಲ್ಲೇ ತುಂಬಿ. ಅಮೆಜಾನ್ ನಲ್ಲಿ ಜಾಹೀರಾತು ಕೊಡುವುದು ಅದರಲ್ಲಿಯೇ. (ಇಲ್ಲಿ ಕನ್ನಡ ಆಯ್ಕೆ ಇಲ್ಲ, ಆದರೆ ನಮ್ಮ KPF ಫೈಲ್ ತಯಾರಾಗಿದೆಯಲ್ಲ, ಕನ್ನಡದಲ್ಲಿ...ಚಿಂತೆಯಿಲ್ಲ!.)




15. ಮಿಕ್ಕ ಸಾಮಾನ್ಯ ಮಾಹಿತಿ, ಯಾವ ತರಹದ ಪುಸ್ತಕ, ಯಾರು ಲೇಖಕ, ಅದರ
16. ಸಾರಾಂಶ ಕನನ್ದ ದಲ್ಲಿಯೂ ಬರೆಯಬಹುದು, ಇಂಗ್ಲೀಷಿನಲ್ಲಿಯೂ ಬರೆಯಬಹುದು
17. ಅದನ್ನೆಲ್ಲ Save ಮಾಡಿ ಮುದಿನ ಪುಟಕ್ಕೆ ಹೋಗಿ. ಹೀಗೆ ಅಲ್ಲ್ಯ ಬರುತ್ತದೆ, ನಿಮ್ಮ KPF File ತಯಾರಾಗಿದೆಯಲ್ಲ ಅದನ್ನು ಸುಮ್ಮನೆ ಅಪ್ಲೋಡ್ ಮಾಡಿ.





18. ಮುಂದೆ ನಿಮಗೆ ಇಷ್ಟವಾದ ಕವರ್/ ಮುಖಪುಟ ಕೊಡುವುದು. ಅದಕ್ಕೆ ಅವರ Cover Creator ಶುರು ಮಾಡಿ . ಅವರ ಲೈಬ್ರರಿ ಚಿತ್ರವಾಗಲಿ, ನಮ್ಮದೇ ಸ್ವಂತ ಚಿತ್ರವಾಗಲಿ ಆಯಾ ಸೈಜಿಗೆ ಮಾಡಿಕೊಡಬೇಕು. ಇಲ್ಲಿ ನೋಡಿ: Cover crerator ಹೀಗಿದೆ.




19. ಅಲ್ಲಿ ಪ್ರಿವ್ಯೂ ಮಾಡಿ ಸೇವ್ ಮಾಡಿ ವೆಬ್ ಪೇಜಿಗೆ ವಾಪಸ್ ಬನ್ನಿ.

20. ಈಗ ಫೈಲನ್ನು ಅಲ್ಲಿರುವ Previewer ಲಾಂಛ್ ಮಾಡಿ ನಲ್ಲಿ ಒಮ್ಮೆ ನೋಡಿಬಿಡಿ.




21. ಹೀಗೆ ಬಂದಿದೆ. ಕನ್ನಡ ಲಿಪಿ ಸರಿಯಾಗಿದೆ: ಕೆಳಗೆ ಚಿತ್ರವಿದೆ



ನಾಗೇಶ್ ಕುಮಾರ್ ಸಿ ಎಸ್

ಅದರಿಂದ ಪಾಲಿಸಿದಾರರ ಕ್ಲೈಮ್ಸ್ ಬರುತ್ತಲ್ಲಾ.?.  ಅವರೇ ಆ ಕ್ಲೈಮ್ಸ್ ವಿಭಾಗದ ಮುಖ್ಯಸ್ಥ..ಜನ್ಮತಃ ಮಹಾ ಜಿಪುಣ...ಒಂದು ಚಿಕ್ಕಾಸೂ ಕಂಪನಿಯಿಂದ ವ್ಯಯವಾಗಬಾರದು ಎನ್ನುವ ಓಬೀರಾಯನ ಕಾಲದಲ್ಲಿ ಕಲಿತ ಸಿದ್ಧಾಂತವನ್ನೇ ಪ್ರತಿಪಾದಿಸುತ್ತಾ ಇಪ್ಪತ್ತೈದು ವರ್ಷ ಸರ್ವೀಸ್ ಮಾಡಿದ್ದವರು. ಕೀರ್ತಿಮಾನ್ ಇಲ್ಲಿಗೆ ನಾಲ್ಕು ವರ್ಷದ ಕೆಳಗೆ ಕೆಲಸಕ್ಕೆ ಸೇರಿದಾಗಿನಿಂದ ಅವರನ್ನು ಗಮನಿಸುತ್ತಲೇ ಇದ್ದ.. ಪ್ರತಿ ಕ್ಲೈಮ್ ಬಂದಾಗಲೂ ಅವರದು ಏನಾದರೂ ಒಂದು ತಕರಾರು.  ಹಣ ಪಾವತಿ ತಪ್ಪಿಸಿಕೊಳ್ಳುವ ಹುನ್ನಾರ. ಅದಕ್ಕೆ ತನ್ನ ಕೈ ಕೆಳಗೆ ದುಡಿಯುವ ಕೀರ್ತಿಮಾನ್ ಯಾವುದಾದರೂ ಪತ್ತೇದಾರಿ ಚಮತ್ಕಾರ ಮಾಡಬೇಕೆಂದು ಬಯಸುವರು...ಕೀರ್ತಿಮಾನ್ ಒಬ್ಬ ನೀಳ ಕೂದಲಿನ ಸದೃಢ ಮೈಕಟ್ಟಿನ ಸ್ಫುರದ್ರೂಪಿ ಯುವಕ...ಅವನಿಗಿನ್ನೂ ಈ ನೌಕರಿಯಲ್ಲಿ ಅನುಭವ ಕಡಿಮೆ ಎಂದವರ ಅಸಮಾಧಾನ.

ಕೀರ್ತಿಮಾನ್ ಕೈಯೆತ್ತಿ  ಸಿಟ್ಟಿಗೆದ್ದಿದ್ದ ಅವರನ್ನು ತಡೆದು " ಜಸ್ಟ್ ಎ ಮಿನಿಟ್ ಸಾರ್. ನಾನು ಓದಿ ಹೇಳಲೇ? " ಎಂದು ಅವರಿತ್ತ ಪತ್ರಿಕೆಯನ್ನೆತ್ತಿಕೊಂಡು ಓದತೊಡಗಿದ.

ಅಂದಿನ ಮುಖ್ಯ ಸುದ್ದಿ ಕಣ್ಣಿಗೆ ರಾಚುವಂತಾ ತಲೆಬರಹದಲ್ಲಿದ್ದುದು:

"***ಕೋಟ್ಯಾಧೀಶ್ವರಿಯ ನಿಗೂಢ ಸಾವು: ಅಂಜನಾ ದೇಸಾಯಿ ನೀರಲ್ಲಿ ಮುಳುಗಿದ್ದೇಕೆ***?"


*....ಹುಟ್ಟುಹಬ್ಬದ ಮೋಜಿನಲ್ಲಿ ಕೊನೆಯುಸಿರೆಳೆದ ನತದೃಷ್ಟೆ...*"

ಕೀರ್ತಿಮಾನ್ಗೆ ತಿಳಿದಂತೆ  ಆಕೆ ನಗರದ ಪ್ರಖ್ಯಾತ ಚಿನ್ನದ ವ್ಯಾಪಾರಿ ಶಶಿಧರ್ ದೇಸಾಯಿಯವರ ಸುಂದರ ಪತ್ನಿ...ಆಕೆ ತಮ್ಮ ಪಾಲಿಸಿ ವಿಷಯವಾಗಿ ಕೆಲ ತಿಂಗಳ ಕೆಳಗೆ ಕಚೇರಿಗೆ ಬಂದಾಗ ಆಕೆಯ ಚೆಲುವನ್ನು ಕಂಡೂ ಎಲ್ಲರಂತೆ ತಾನೂ ಮೂಕವಿಸ್ಮಿತನಾಗಿದ್ದ.


ದೇಶ ವಿದೇಶದಲ್ಲೂ ನಂ.೧ ಆಭರಣಗಳ ಅಂಗಡಿ ಚೈನ್  ಎಂದೇ ಸುಪ್ರಸಿದ್ಧವಾದ "ದೇಸಾಯಿ ಜ್ಯುವೆಲರ್ಸ್"ನ ಮಾಲೀಕ ೫೫ ವರ್ಷ ವಯಸ್ಸಿನ ಶಶಿಧರ್ ತನ್ನ

6

22. ಸೇವ್ ಮಾಡಿ ಮುಂದೆ ಹೋಗಿ: ಇಲ್ಲಿ ಪುಸ್ತಕದ ಬೆಲೆ, ಎಲ್ಲಿ ಅಮೆಜಾನ್  ನಲ್ಲಿ ಪ್ರಕಟವಾಗಬೇಕು- ಆರಿಸಿಕೊಳ್ಳಿ.




23. ಅದೆಲ್ಲ ನಿಮ್ಮಿಚ್ಚೆಯಂತೆ ತುಂಬಿಸಿ Publish button ಕ್ಲಿಕ್ ಮಾಡಿ:




ಅಷ್ಟೆ.. ಇನ್ನು ಅವರು ಪಬ್ಲಿಷ್ ಮಾಡಿದ ಎಲೆ ಇಲ್ಲಿ ಲಿಂಕ್ ಸಿಗುತ್ತದೆ ಅಮೆಜಾನ್ ಆಂಅಗಡಿ ಲಿಂಕ್..

**<u>ಟಿಪ್ಸ್:</u>**

ಪೂರ್ತಿ ಪುಸ್ತಕ ಮೊದಲೇ ಮಾಡುವ ಬದಲು ಒಮ್ಮೆ ಕನ್ನಡ /ಇಂಗ್ಲೀಷ್ ಭಾಷೆಯ ಒಂದು ಚಿಕ್ಕ example file ಟ್ರೈ ಮಾಡಿ ನೋಡಿ. ಎಲ್ಲ ಸ್ಟೆಪ್ಸ್ ಗೊತ್ತಾದ ಮೇಲೆ ಪೂರ್ತಿ ಪುಸ್ತಕ kpf and cover ಅಪ್ಲೋಡ್ ಮಾಡಿಕೊಳ್ಳಿ.

## ಗುಡ್ ಲಕ್!